ದಿನಾಂಕ 10.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ.ಎನ್ ಟಿ ವಕೀಲರಿಂದಃ</u>

6. ನನ್ನ ವಿದ್ಯಾಭ್ಯಾಸ ಚನ್ನಪಟ್ಟಣದಲ್ಲಿ ಆಗಿರುತ್ತದೆ. ನನ್ನ ಮಾವನ ಹೆಸರು ಬಿ. ಮದ್ದೂರಪ್ಪ ಎಂದು. ನಿಮ್ಮ ಮಾವನ ಮನಗೆ ಬಂದು ವಿದ್ಯಾಭ್ಯಾಸ ಮಾಡಲು ಕಾರಣ ಏನು ಎಂದರೇ ಸಾಕ್ಷಿ ನಾನು ಗ್ರಾಮೀಣ ಭಾಗದಲ್ಲಿ ಇದ್ದ ಕಾರಣ ನನ್ನ ಮಾವಾನವರು ಇಲ್ಲೆ ವಾಸ ಇದ್ದರು ಒಳ್ಳೆ ವಿದ್ಯಾಭ್ಯಾಸ ಕೊಡಿಸುತ್ತೇನೆಂದು ಕರೆದುಕೊಂಡು ಬಂದಿದ್ದರು. ನಾವು 6 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ನಮ್ಮ ಮನೆಯಲ್ಲಿ ಕಷ್ಟ ಇದ್ದ ಕಾರಣ ನಮ್ಮ ಮಾವನರು ನಮ್ಮನ್ನು ಕರೆದುಕೊಂಡು ಬಂದಿದ್ದಾರೆ ಎಂದರೇ ಇಲ್ಲ. ನಿಮ್ಮ ಓದಿಗೆ ನಿಮ್ಮ ತಂದೆಯವರು ನಿಮ್ಮ ಮಾವನವರಿಗೆ ತಿಂಗಳಿಗೆ ಮತ್ತು ವರ್ಷಕ್ಕೆ ಹಣ ಕೊಡುತ್ತಿದ್ದಾರ ಎಂದರೇ ಇಲ್ಲ. ಆದರೆ ನನಗೆ ಬಿಡುವು ಇದ್ದಾಗ ಅವರ ತೋಟದಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಮಾವನಿಗೆ ಗಂಡು ಸಂತಾನ ಇರಲಿಲ್ಲ ಎಂದರೇ ಹೌದು. ಆದ ಕಾರಣ ನನ್ನ ಮಾವ ಅವರ ತಮ್ಮನ ಮಗ ಶಿವಣ್ಣ ನನ್ನು ಸಾಕು ಮಗನಾಗಿ ಮನೆಯಲ್ಲಿ ಸಾಕಿಕೊಂಡಿದ್ದರು ಎಂದರೇ ಹೌದು. ನಾನು ತೋಟದಲ್ಲಿ ಕೆಲಸ ಮಾಡುತ್ತಿರಲಿಲ್ಲ ಅವರ ಸಾಕು ಮಗ ಕೆಲಸ ಮಾಡುತ್ತಿದ್ದರು ಎಂದರೇ ಇಬ್ಬರು ಸಹ ಕೆಲಸ ಮಾಡುತ್ತಿದ್ದೇವು.

7. 1ನೇ ಅನುಸೂಚಿ ಸ್ವತ್ತು ಮೂಲತಃ ನನ್ನ ದೊಡ್ಡಪ್ಪನ ಸ್ವತ್ತು ಎಂದರೇ ಇಲ್ಲ. ನನ್ನ ತಾತನ ಸ್ವತ್ತು. ಅದರಲ್ಲಿ ಅವರ ಇಬ್ಬರು ಮಕ್ಕಳಿಗೆ ಸಾಮನಾಗಿ ಕೊಟ್ಟಿದ್ದಾರೆ. ಸಾಮಾನಾಗಿ ಬಂದ ಜಮೀನನ್ನು ನನ್ನ ತಂದೆ ಖರೀದಿ ಮಾಡಿದ್ದರು ಎಂದರೇ ಹೌದು. ನನ್ನ ತಂದೆ ಅವರು ಎಷ್ಟು ಹಣ ನೀಡಿ ಖರೀದಿ ಮಾಡಿದ್ದಾರೆ ಎಂದರೇ ಸಾಕ್ಷಿ ಗುಂಟೆಗೆ ರೂ. 3,300/- ನ್ನು ಕೊಟ್ಟು ಖರೀದಿ ಮಾಡಿದ್ದಾರೆ. ನಿಡಿ-7 ರಂತೆ ನನಗೆ ಆ ಸ್ವತ್ತಿನಲ್ಲಿ 1 ಎಕರೆ 30 ಗುಂಟೆ ಬಂದಿದೆ ಎಂದರೇ ಹೌದು.

ನಿಡಿ-7 ರಲ್ಲಿ ಪುಟ ಸಂಖ್ಯೆ 2 ರ ಕೊನೆಯಲ್ಲಿ ನನ್ನ 3ನೇ ಮಗ ಕೆ ಬೀರೇಶ್ ತನ್ನ ಸಂಪಾದನೆ ಹಣವನ್ನು ನೀಡಿರುವುದರ ಜೊತೆಗೆ ನಮ್ಮ ಕುಟುಂಬದ ಒಟ್ಟಾರೆ ಅಭಿವೃದ್ದಿಗೆ ಆರ್ಥಿಕ ಸಹಾಯ ಮಾಡಿಕೊಂಡು ಬಂದಿರುವುದರಿಂದ ಷಡ್ಯೂಲ್ ಸ್ವತ್ತಿನಲ್ಲಿ 1 ಎಕರೆ ಜಮೀನನ್ನು ಹೆಚ್ಚುವರಿಯಾಗಿ ಬಿಟ್ಟು ಕೊಟ್ಟಿದ್ದು ಎಂದು ಬರೆದಿದ್ದಾರೆ ಎಂದರೇ ಹೌದು. ನಿಮ್ಮ ತಂದೆಯವರು ನಿಮ್ಮ ದೊಡ್ಡಪ್ಪರವರಿಂದ 2 ಎಕರೆ 30 ಗುಂಟೆ ಖರೀದಿ ಮಾಡಲು ಎಷ್ಟು ಹಣ ಕೊಟ್ಟಿದ್ದೀರ ಎಂದರೇ ಸಾಕ್ಷಿ ಶೇಕಡ 90 ರಷ್ಟು ಹಣವನ್ನು ನಾನೇ ಕೊಟ್ಟಿದ್ದೇನೆ. ಶೇಕಡ 90 ರಷ್ಟು ಹಣವನ್ನು ಪಾವತಿ ಮಾಡಿರುವುದಕ್ಕೆ ನಿಮ್ಮ Assets Liability ಅಲ್ಲಿ ಆ ಸಂದರ್ಭದಲ್ಲಿ ತೋರಿಸಿದ್ದೀರ ಎಂದರೇ ಹೌದು. ನನ್ನ ತಂದೆ ಹೆಸರಿನಲಿಲ ಇದೆ ಎಂದು ತೋರಿಸಿದ್ದೇನೆ. ಆ ವರ್ಷದ Assets Liability ನ್ನು ನ್ಯಾಯಾಲಯ ಅನುಮತಿ ನೀಡಿದ್ದಾರೆ ಹಾಜರುಪಡಿಸಬಹುದಾ ಎಂದರೇ ಸಿಕ್ಕಿದ್ದಾರೆ ಹಾಜರುಪಡಿಸುತ್ತೇನೆ. ನಿಡಿ-7 ನ್ನು ಮಾಡಿಕೊಳ್ಳುವಾಗ ನಿಮ್ಮ ಗ್ರಾಮದ ಯಜಮಾನರು ಮತ್ತು ಮುಖಂಡರು ಇದ್ದಾರ ಎಂದರೆ ಹೌದು. ನನ್ನ ಕುಟುಂಬದ ಆಪ್ತರು ಮತ್ತು ಮುಖಂಡರು ಇದ್ದರು . ಅವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ನಿಡಿ-7 ರ ಸಾಕ್ಷಿದಾರರನ್ನು ವಿಚಾರಣೆಗೆ ಹಾಜರುಪಡಿಸಲು ತೊಂದರೇ ಇದೆಯಾ ಎಂದರೇ ಇಲ್ಲ.

8. ನಮ್ಮ ತಂದೆಯವರು ನಮ್ಮ ಗ್ರಾಮದಲ್ಲಿ ನಮ್ಮ ಸಮುದಾಯದ ಯಜಮಾನರು ಆಗಿದ್ದರು ಎಂದರೇ ಹೌದು. ಆ ಯಜಮಾನಿಕೆಯನ್ನು ಯಾರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದರೇ ಸಾಕ್ಷಿ ನನ್ನ ತಂದೆ ತೀರಿದ ಬಳಿಕ ನನ್ನ ದೊಡ್ಡಣ್ಣಮಾಡುತ್ತಿದ್ದರು. ಅವರು ಆಗುವುದಿಲ್ಲ ಎಂದು ಹೇಳಿದ ಕಾರಣ 2ನೇ ಅಣ್ಣ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಯಾವ ಸ್ಥಳದಲ್ಲಿ ನಿಮ್ಮ ತಾಯಿಯನ್ನು ನೋಡಿಕೊಳ್ಳುತ್ತಿದ್ದೀರಿ ಎಂದರೇ ಕೊಂಡಬಳ್ಳಿ ಗ್ರಾಮದಲ್ಲಿ ಇದ್ದರು ನೋಡಿಕೊಳ್ಳುತ್ತಿದ್ದರು. 5ನೇ ಪ್ರತಿವಾದಿಯನ್ನು ಮನೆಯಲ್ಲಿ ಇರಿಸಿ ನಾನು ಹೋಗಿ

ಬಂದು ನೋಡಿಕೊಳ್ಳುತ್ತಿದ್ದೆ. ಅಲ್ಲದೆ ಹಣವನ್ನು ಸಹ ಕೊಡುತ್ತಿದ್ದೆ. ಇತರ ಸಹೋದರರು ಅದಕ್ಕೆ ಕೈ ಜೋಡಿಸಿದ್ದಾರೆ. ನಮ್ಮ ತಾಯಿ ಕೊನೆ ಕಾಲದಲ್ಲಿ ಹಾಸಿಗೆ ಹಿಡಿದ್ದರು ಎಂದರೇ ಹೌದು. ಆ ಸಮಯದಲ್ಲಿ 5ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮತ್ತು ಇತರ ಸಹೋದರರು ನೋಡಿಕೊಳ್ಳುತ್ತಿದ್ದರು. ನಾನು ಹೇಳಿದ 5ನೇ ಪ್ರತಿವಾದಿ ಮತ್ತು ಇತರ ಸಹೋದರರು ನನ್ನ ತಾಯಿಯವರನ್ನು ನೋಡಿಕೊಂಡಿರುದಿಲ್ಲ. ಕಾರಣ ನನಗೆ 1 ಎಕರೆ ಜಮೀನಿಗೆ ಸಂಬಂದ ಪಟ್ಟಂತೆ ಸುಳ್ಳು ಖಾತೆ ಮಾಡಿಸಿಕೊಂಡಿದ್ದಾರೆಂದು ನನ್ನ ತಾಯಿ ಜೊತೆ ಜಗಳ ಆಡುತ್ತಿದ್ದರು ಎಂದರೇ ಸುಳ್ಳು. ನನ್ನ ತಾಯಿಯ ತಿಥಿ ಕಾರ್ಯದಲ್ಲಿ ವಾದಿಯನ್ನು ಸೇರಿಸದೆ ಕಾರ್ಯ ಮಾಡಿರುವುದರಿಂದ ವಾದಿಯೇ ಪ್ರತೇಕವಾಗಿ ತಿಥಿ ಕಾರ್ಯ ಮಾಡಿದ್ದಾರೆಂದರೇ ಸುಳ್ಳು. ಅದೇ ರೀತಿ 6 ಮತ್ತು 7 ಪ್ರತಿವಾದಿಯನ್ನು ಕಾರ್ಯಕ್ಕೆ ಸೇರಿಸದೆ ಮಾಡಿದ್ದೇವೆ ಎಂದರೇ ಸುಳ್ಳು. ಅವರು ನಮ್ಮ ಮೂಲಕ ಕಾರ್ಯಕ್ಕೆ ಬಂದಿರಲಿಲ್ಲ ಅಲ್ಲದೆ ನಾವು ಅವರಿಗೆ ಆಹ್ವಾನ ಕೊಟ್ಟಿರಲಿಲ್ಲ ಎಂದರೇ ಸರಿಯಲ್ಲ. ನಮ್ಮ ತಾಯಿ ಮೃತ ಪಡುವ ಕಾಲಕ್ಕೆ ದಾವೆ ಯನ್ನು ಸಲ್ಲಿಸಲಾಗಿತ್ತು ಎಂದರೇ ಹೌದು.

9. ವಾದಿ, 6 ಮತ್ತು 7 ಪ್ರತಿವಾದಿಯರು ದಾವೆ ಸಲ್ಲಿಸಿದ ಕಾರಣ ಉದ್ದೇಶ ಪೂರ್ವಕವಾಗಿ ಅವರನ್ನು ನಮ್ಮ ತಾಯಿಯ ಕಾರ್ಯಕ್ಕೆ ಕರೆದಿಲ್ಲ ಎಂದರೇ ಸುಳ್ಳು. ಎಲ್ಲಾರು ಸಹ ಹಾಜರಿದ್ದರು. ನಮ್ಮ ತಾಯಿ ಮೃತ ಪಟ್ಟ ಬಳಿಕ ಅವರ ಹತ್ತಿರ ಇದ್ದ ಚಿನ್ನ ಮತ್ತು ಒಡವೆ ಯಾರ ಹತ್ತಿರ ಇದೆ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನಾನು ಚನ್ನಪಟ್ಟಣದಲ್ಲಿ ವಾಸ ಇದ್ದೇನೆ. ನಮ್ಮ ತಾಯಿಯ ತಿಥಿ ಕಾರ್ಯಕ್ಕೆ ಹಣವನ್ನು ಕೊಟಿಟದ್ದೇನೆ ಎಂದು ತಿಳಿಸಿದ್ದು ಈಗಿರುವಾಗ ತಾಯಿಯ ಬಳಿ ಇದ್ದ ಚಿನ್ನ ಮತ್ತು ಒಡವೆಯನ್ನು ಯಾರು ಪಡೆದಿದ್ದಾರೆ ಎಂದು ಗೊತ್ತಿಲ್ಲವಾ ಎಂದರೇ ಸಾಕ್ಷಿ ಒಡವೆ ಬಗ್ಗೆ ನನಗೆ ಗೊತ್ತಿಲ್ಲ. ಮಗನಾಗಿ ನನ್ನ ಕರ್ತವ್ಯ ಮಾಡಿದ್ದೇನೆ. ನಮ್ಮ ತಾಯಿ ಅವರ ಜೀವಾತಧಿಯಲ್ಲಿ ಅವರ ಹತ್ತಿರ ಇದ್ದ ಚಿನ್ನ ಮತ್ತು ಒಡವೆ ಹೆಣ್ಣು ಮಕ್ಕಳಿಗೆ

ಸೇರಬೇಕು ಎಂದು ಹೇಳಿದ್ದಾರೆ ಎಂದರೇ ಆ ರೀತಿ ನನ್ನ ತಾಯಿ ನನ್ನ ಗಮನಕ್ಕೆ ತಂದಿಲ್ಲ. ನಾನೇ ಕೆಲವು ಒಡವೆಗಳನ್ನು ನನ್ನ ತಾಯಿಗೆ ಮಾಡಿಸಿಕೊಟ್ಟಿದ್ದೇನೆ. ನನ್ನ ತಂದೆ ವ್ಯವಸಾಯ ಮಾಡುವಾಗ ಕಬ್ಬನ್ನು ಬೆಳೆಯುತ್ತಿದ್ದರು ಎಂದರೇ ಹೌದು. ಕಬ್ಬು ಬೆಳೆಯಿಂದ ಬಂದ ಹಣವನ್ನು ಬೆಂಗಳೂರನಲ್ಲಿ ನಾನು ಮನೆ ಕಟ್ಟುವಾಗ ಸಂಪೂರ್ಣ ವಾಗಿ ನನಗೆ ಕೊಟ್ಟಿದ್ದೀರೆ ಎಂದರೇ ಇಲ್ಲ. ನನ್ನ ಹೆಂಡತಿ ತನ್ನ ಸ್ವಂತ ಹಣದಲ್ಲಿ ಅವರ ತಂದೆ ತಾಯಿ ಕೊಟ್ಟ ಸ್ವತ್ತಿನಲ್ಲಿ ಮನೆ ಕಟ್ಟಿಸಿದ್ದಾರೆ. 1980 ರಿಂದ ನನ್ನ ತಂದೆ ಕಬ್ಬನ್ನು ಬೆಳೆಯುತ್ತಿದ್ದರು ಎಂದರೇ ನಿಖರವಾಗಿ ಗೊತ್ತಿಲ್ಲ. ಅದೇ ಮನೆಯಲ್ಲಿ ಇದ್ದ ಕಾರಣ ಕಬ್ಬಿನಿಂದ ಬಂದ ಹಣ ಎಲ್ಲಿ ಉಪಯೋಗ ಆಗಿತ್ತು ಎಂದರೇ ಸಾಕ್ಷಿ ಬೆಳೆ ಸಾಲ, ಮಕ್ಕಳ ಮದುವೆ, ವ್ಯವಸಾಯದ ಖರ್ಚು. ಕೌಟುಂಬಿಕ ದರದು ನಿಮಿತ್ತ ಬಳಸಿಕೊಂಡಿದ್ದಾರೆ. ನನ್ನ ತಂದೆ ರೇಷ್ಮೆ ಬೆಳೆಯುತ್ತಿದ್ದರು ಎಂದರೆ ಹೌದು. ರೇಷ್ಮೆ ಮತ್ತು ಕಬ್ಬಿನಿಂದ ಬಂದ ಹಣ ನನ್ನ ದೊಡ್ಡಪ್ಪನ ಜಮೀನು ಖರೀದಿ ಮಾಡಲು ಸಾಕಷ್ಟು ಇತ್ತು ನನ್ನ ಹತ್ತಿರ ಹಣ ಪಡೆದಿಲ್ಲ ಎಂದರೇ ಸುಳ್ಳು. ನನ್ನ ತಂದೆಯವರು ಹೈನುಗಾರಿಕೆ ಮಾಡುತ್ತಿದ್ದರು ಎಂದರೇ ಹೌದು. ರೇಷ್ಮೆ, ಕಬ್ಬು ಮತ್ತು ಹೈನುಗಾರಿಕೆ ಇಂದ ಬಂದ ಹಣದಿಂದ ನನ್ನ ತಂದೆ ನನ್ನ ದೊಡ್ಡಪ್ಪನ ಜಮೀನು ಖರೀದಿ ಮಾಡಿದ್ದಾರೆ ಎಂದರೇ ಸುಳ್ಳು.

10. ದಿ 25.04.2010 ರಂದು ಸರ್ವೆ ನಂ 64 ಕ್ಕೆ ಮಾತ್ರ ವಿಭಾಗ ಮಾಡಿಕೊಂಡಿದ್ದೀರಿ ಎಂದರೇ ಹೌದು. ಅದೇ ದಿನ 2 ರಿಂದ 7ನೇ ಅನುಸೂಚಿ ಸ್ವತ್ತನ್ನು ಮಾಡಿಕೊಳ್ಳಲು ತೊಂದರೆ ಇತ್ತ ಎಂದರೇ ಸಾಕ್ಷಿ ಇನ್ನೊಂದು ಸ್ವತ್ತನ್ನು ಖರೀದಿ ಮಾಡಲು ನನ್ನ ದೊಡ್ಡಪ್ಪನಿಂದ ಕರಾರು ಮಾಡಿಕೊಂಡ ಕಾರಣ ಮಾಡಿಕೊಂಡಿರುವುದಿಲ್ಲ. ನಿಡಿ-7 ಕ್ಕೆ ಅಷ್ಟು ಜನ ಒಂದೇ ಸ್ಥಳದಲ್ಲಿ ಕುಳಿತು ಸಹಿ ಮಾಡಿಲ್ಲ ಎಂದರೇ ಹೌದು. ಸಾಕ್ಷಿ ಮುಂದುವರೆದು ಎಲ್ಲಾರು ಒಟ್ಟು ಕೂತು ಮಾಡಿದ್ದೇವೆ. ನಿಡಿ-7ರ ಸಾಕ್ಷಿದಾರರ ಸಮಕ್ಷಮ ನಿಡಿ-7 ನ್ನು ಮಾಡಿಕೊಂಡಿದ್ದೀರ

ಎಂದರೇ ಹೌದು. 7 ಜನ ಸಹಿ ಮಾಡಿರುವ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ 7ನೇ ಪ್ರತಿವಾದಿ ಮುಂದೆ ಸಹಿ ಪಡೆದುಕೊಳ್ಳುವ ಸಂದರ್ಭ ಉದ್ಭಾಸಿತ್ತು ಎಂದರೇ ಇಲ್ಲ. 8 ಜನ ಸೇರಿ ಮಾಡಿಕೊಂಡಿದ್ದಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)